MADAM SPEAKER —The Notification are laid :

Karnataka Preservation of Trees (Amendment) Bill, 1977:— Introduction.

SRI K. H. PATIL (Minister for Food and Forest).—Madam I beg to move :

"That leave be granted to introduce the Karnataka Preservation of Trees (Amendment) Bill, 1977."

MADAM SPEAKER.—The question is :

"That leave be granted to introduce the Karnataka Preservation of Trees (Amendment) Bill, 1977."

The motion was adopted and leave was granted

SRI K. H. PATIL.—Madam, I beg to introduce the Bill.

MADAM SPEAKER.—The Bill is introduced. **

Karnataka Secondary Education Examination Board (Amendment) Bill, 1977.—Introduction.

SRI MALILKARJUNA KHARGE (Minister of State for Primary and Secondary Education).—Madam, I beg to move:

"That leave be granted to introduce the Karnataka Secondary Education Examination Board (Amendment) Bill, 1977."

MADAM SPEAKER.—The question is :

"That leave be granted to introduce the Karnataka Secondary Education Examination Board (Amendment) Bill, 1977."

The motion was adopted and leave was granted.

SRI MALLIKARJUNA KHARGE.—Madam, I beg to introduce the Bill,

MADAM SPEAKER.—The Bill, is introduced. **

Strike by the Forum of Trade Union Employees

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅಧ್ಯಕ್ಷರೇ, ತಮ್ಮ ಮುಂದೆ ನಾನು ಈಗ ಒಂದು ಪ್ರಾಮುಖ್ಯವಾದ ವಿಷಯವನ್ನು ತಿಳಿಸಬೇಕಾಗಿದೆ. ಫೋರಂ ಆಫ್ ಟ್ರೇಡ್ ಯೂನಿಯನ್‌ನ ಹಲವಾರು ಕಾರ್ಮಿಕರು ಇಲ್ಲಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರು ಒಂದು ಛಾರ್ಟರ್ ಆಫ್ ಡಿಮ್ಯಾಂಡ್ಸ್ ಅನ್ನು ಕಾರ್ಮಿಕ ಸಚಿವರಿಗೆ ಕಳುಹಿಸಿಕೊಟ್ಟಿದ್ದಾರೆ. ಅವರ ಡಿಮ್ಯಾಂಡ್ಸ್ ಏನು ಇವೆ ಎಂದರೆ ಪ್ರೊಫೆಷನಲ್ ಟ್ಯಾಕ್ಸ್ ಅನ್ನು ರದ್ದು ಮಾಡತಕ್ಕ ಥಾದ್ದು ಮತ್ತು ಪ್ರೈವೇಟ್ ಮತ್ತು ಪಬ್ಲಿಕ್ ಸೆಕ್ಟಾರ್‌ನಲ್ಲಿ ಕೆಲವಾರು ಜನರನ್ನು ಏನು ರಿಟ್ರೆಂಜ್ ಮಾಡಿದ್ದಾರೋ ಅವರನ್ನು ವಾಪಸ್ಸು ಕೆಲಸಕ್ಕೆ ತೆಗೆದುಕೊಳ್ಳುವ

** Bill appended, Annexure, to this Volume.

ಬಗ್ಗೆ ಒಂದು ಮನವಿಯನ್ನು ಕಳುಹಿಸಿಕೊಟ್ಟಿದ್ದಾರೆ. ಅವರು ೨-೩ ದಿವಸಗಳಿಂದಲೂ ಕೂಡ ಇಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದರೂ ಕೂಡ ಅವರನ್ನು ಕರೆಸಿ ವಿಚಾರ ಮಾಡುವುದು ಆಗಲಿ, ಚರ್ಚೆ ಮಾಡುವುದು ಆಗಲಿ ಏನೂ ಕೂಡ ಮಾಡಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಉತ್ತರ ಹೇಳಬೇಕು ಅಂತ ನಾನು ಕೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ತುರ್ತು ಪರಿಸ್ಥಿತಿಯಲ್ಲಿ ಯಾರು ಯಾರನ್ನು ಕೆಲಸದಿಂದ ತೆಗೆದು ಹಾಕಿದ್ದರೋ ಅವರನ್ನು ವಾಪಸ್ಸು ಕರೆಸಿ ಕೆಲಸ ಕೊಡಬೇಕೆಂದು ಆದೇಶ ಬಂದಿದ್ದರೂ ಕೂಡ ರಾಜ್ಯ ಸರ್ಕಾರ ಈ ಬಗ್ಗೆ ಇನ್ನೂ ಕೂಡ ಯಾವ ಕಾರ್ಯಕ್ರಮವನ್ನೂ ಸಹ ತೆಗೆದುಕೊಂಡಿಲ್ಲಾ. ಇಷ್ಟೇ ಅಲ್ಲ ನಮ್ಮ ಕಣ್ಣಿಗೆ ಮುಂದೇನೇ ನಿನ್ನೆ ಅಖಿಲ ಭಾರತಾದ್ಯಂತ ಪತ್ರಿಕೋದ್ಯಮಿಗಳ ಸ್ಟೈಕ್ ಆಯಿತು. ಈವೊತ್ತು ನಮ್ಮ ರಾಜ್ಯದಲ್ಲಿ ವಿಶಾಲ ಕರ್ನಾಟಕದ ಆಫೀಸಿನ ಬಾಗಿಲು ಇನ್ನೂ ತೆಗೆದೇ ಇಲ್ಲ. ಅಲ್ಲಿರುವ ಕಾರ್ಮಿಕರನ್ನು ಹೊರಗೆ ಹಾಕಿದ್ದಾರೆ. ಆ ಮಾಲೀಕರನ್ನು ಕರೆಸಿ ಅವರನ್ನು ರೀ ಅಪಾಯಿಂಟ್ ಮಾಡುವ ಹಾಗೆ ಇನ್ನೂ ಯಾವ ಕಾರ್ಯಕ್ರಮವನ್ನೂ ಸಹ ತೆಗೆದು ಕೊಂಡಿಲ್ಲಾ. ಅವರದ್ದು ಇನ್ನೂ ಅನೇಕ ಬೇಡಿಕೆಗಳು ಇವೆ. ಇದರ ಬಗ್ಗೆ ಅವರುಗಳು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ನಿಮಗೆ ಹೇಳಬೇಕಾದರೆ ಮೊದಲು ನಮ್ಮ ರಾಜ್ಯದಲ್ಲಿ ಒಂದು ತ್ರಿಪಕ್ಷ ಸಮಿತಿ ಇತ್ತು. ಎಮೆರ್ಜೆನ್ಸಿ ಬಂದಮೇಲೆ ಅದನ್ನು ರದ್ದು ಮಾಡಿಬಿಟ್ಟು ಎ.ಐ.ಟಿ.ಎ.ಸಿ. ಅದು ಇದು ಅಂತ ಇಟ್ಟು ಕೊಂಡರು. ಈವೊತ್ತು ಅದೂ ಇಲ್ಲ. ಅವರುಗಳು ಈವೊತ್ತಿನ ದಿವಸ ಯಾರ ಕೂಡ ಚರ್ಚೆ ಮಾಡಬೇಕು ? ಆದುದರಿಂದ ಅವರುಗಳನ್ನು ಕರೆಸಿ ಚರ್ಚೆ ಮಾಡಿ ಅವರುಗಳು ಕೈಗೊಂಡಿರತಕ್ಕಂಥ ಸತ್ಯಾಗ್ರಹವನ್ನು ಕೈಬಿಡಿಸಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್ವಾಳ).—ಈ ವಿಚಾರದಲ್ಲಿ ನಾನೂ ಕೂಡ ಒಂದು ಮಾತು ಹೇಳುತ್ತೇನೆ. ಎ.ಐ.ಟಿ.ಯು.ಸಿ. ಕಾರ್ಮಿಕರು ಇದರ ಬಗ್ಗೆ ಅನ್ಯ ಸತ್ಯಾಗ್ರಹವನ್ನು ೧೩ನೇ ತಾರೀಕಿನಿಂದಲೂ ಮಾಡುತ್ತಿದ್ದಾರೆ ಮಾನ್ಯ ಮಂತ್ರಿಗಳಿಗೆ ಇದರ ಬಗ್ಗೆ ಒಂದು ಮನವಿಯನ್ನೂ ಕೂಡ ಅರ್ಪಿಸಿದ್ದಾರೆ. ಪ್ರೊಫೆಷನಲ್ ಟ್ಯಾಕ್ಸ್ ಅನ್ನು ರದ್ದು ಮಾಡುವುದು ಇನ್ನು ಇತರ ವಿಷಯಗಳ ಬಗ್ಗೆ ಅವರ ಡಿಮ್ಯಾಂಡ್ಸ್ ಅನ್ನು ಇಟ್ಟಿದ್ದಾರೆ. ಇಷ್ಟೇ ಅಲ್ಲದೆ ಶಂಕರ್ ಟೆಕ್ಸ್‌ಟೈಲ್ ಮಿಲ್ ಈವೊತ್ತಿನ ದಿವಸ ಡೆಡ್ ಲಾಕ್ ಆಗಿದೆ ಅದನ್ನು ತೆಗೆಸಬೇಕು ಎಂದು ಹೇಳುತ್ತೇನೆ. ಅಲ್ಲಿಯ ಕಾರ್ಮಿಕರನ್ನು ಪುನಃ ವಾಪಸ್ಸು ಕೆಲಸಕ್ಕೆ ತೆಗೆದು ಕೊಳ್ಳುವಂತೆ ತಕ್ಕ ಕಾರ್ಯಕ್ರಮವನ್ನು ಮಾನ್ಯ ಮಂತ್ರಿಗಳು ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

† ಶ್ರೀ ಸಿ. ಎನ್. ಪಾಟೀಲ್ (ಕಾರ್ಮಿಕ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಇಂದು ಬೆಳಿಗ್ಗೆ ಫೋರಂ ಆಫ್ ಟ್ರೇಡ್ ಯೂನಿಯನ್ಸ್‌ನ ಕೆಲವು ಪ್ರತಿನಿಧಿಗಳು ನನ್ನ ಹತ್ತಿರ ಬಂದಿದ್ದರು. ಅವರು ಸಾಯಂಕಾಲ ೪ ಗಂಟೆ ಒಳಗೆ ಒಂದು ಮೆಮೋರ್ಯಾಂಡಂ ಅನ್ನು ಬರೆದು ಕೊಡುವುದಕ್ಕೆ ಟೈಂ ತೆಗೆದುಕೊಂಡು ಹೋಗಿದ್ದಾರೆ. ನಾಳೆ ದಿವಸ ಇದಕ್ಕೆ ಸಂಬಂಧಪಟ್ಟಂತೆ ಇರುವ ಲೇಬರ್ ಅಧಿಕಾರಿಗಳನ್ನು, ಮತ್ತು ಇಂಡಸ್ಟ್ರೀಸ್ ಅಧಿಕಾರಿಗಳನ್ನು ಮತ್ತು ರಿಜಿಸ್ಟ್ರಾರ್ ಆಫ್ ಕೋ ಆಪರೇಟೀವ್ಸ್ ಅವರನ್ನೂ ಕರೆಸಿ ಈ ಬಗ್ಗೆ ಚರ್ಚೆ ಮಾಡಿ ಡೆಡ್ ಲಾಕ್ ಮಾಡಿರುವ ಈ ಶಂಕರ್ ಟೆಕ್ಸ್‌ಟೈಲ್ ಮಿಲ್ ಬಗ್ಗೆ ಏನಾದರೂ ಒಂದು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ತಮ್ಮ ಮೂಲಕ ಅವರಿಗೆ ಭರವಸೆ ಕೊಡುತ್ತೇನೆ.

ಇನ್ನು ಎಮೆರ್ಜೆನ್ಸಿ ಸಮಯದಲ್ಲಿ ಕಾರ್ಖಾನೆಗಳಲ್ಲಿ ಯಾರನ್ನು ಡಿಸ್‌ಮಿಸ್ ಮಾಡಿದ್ದರೋ ಅವರನ್ನು ಇನ್ನೂ ರೀ ಅಪಾಯಿಂಟ್ ಮಾಡಿಲ್ಲಾ ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ತಿಳಿಸುವುದು ಏನೆಂದರೆ ಯಾವ ಕಾರ್ಖಾನೆಗಳಲ್ಲಿ ಅವರನ್ನೂ ಇನ್ನೂ ಕೆಲಸಕ್ಕೆ ವಾಪಸ್ಸು ತೆಗೆದು ಕೊಂಡಿಲ್ಲವೋ ಅದನ್ನು ನನ್ನ ಗಮನಕ್ಕೆ ತ ದರೆ ಆ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ಅಧ್ಯಕ್ಷರ ಮೂಲಕ ತಮಗೆ ಭರವಸೆ ಕೊಡುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಈ ಬಗ್ಗೆ ಎ ಐ.ಟಿ.ಯು.ಸಿ. ಅವರನ್ನು ಕರೆಸಿ ಮಾತುಕತೆ ನಡೆಸಿ. ಅವರು ಈ ಬಗ್ಗೆ ಏನು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ ಅದರ ಬಗ್ಗೆ ಒಂದು ಮನವಿಯನ್ನೂ ಕೂಡ ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿ ಕೊಟ್ಟಿದ್ದಾರೆ. ಕಾರ್ಮಿಕರ ಕೆಲವು ಸಮಸ್ಯೆಗಳನ್ನು